ಇಂದು ದಿ: **07.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ವಾದಿಗಳ ಪರಃ ಶ್ರೀ ಎಸ್ ಎಂ ವಕೀಲರಿಂದ

ನಮ್ಮ ತಂದೆ ಮೂಲ ದಾವೆ ನಂ. 288/2017 ನ್ನು ಸಿದ್ದಪ್ಪ, ತಿಪ್ಪೇಶಪ್ಪ, ಗಂಗಾಧರ, ರಮೇಶ ಮತ್ತು ಅವರ ತಾಯಿ ಲಕ್ಕವ್ವ ಇವರ ವಿರುದ್ದ ಸಲ್ಲಿಸಿದ್ದ ಎಂದರೆ ಸಾಕ್ಷಿ ನಮ್ಮ ತಂದೆಯ ವಿರುದ್ದ ಅವರು ಸಲ್ಲಿಸಿದ್ದರು ಎಂದು ಹೇಳುತ್ತಾರೆ. ಸದರಿ ದಾವೆ 2022 ರಲ್ಲಿ ವಜಾ ಆಗಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ದಾವಾ 3 ಆಸ್ತಿಗಳು 1960 ರಲ್ಲಿ ಆದಂತಹ ಪಾಲು ವಿಭಾಗದಲ್ಲಿ ತಿಮ್ಮವ್ವ ಇವಳ ಭಾಗಕ್ಕೆ ಬಂದಿರುತ್ತವೆ ಎಂದರೆ ಸಾಕ್ಷಿ 1 ಆಸ್ತಿ ನಮಗೆ ಬಂದಿರುತ್ತದೆ ಎಂದು ಹೇಳುತ್ತಾರೆ. ತಿಮ್ಮವ್ವ ಇವಳಿಗೆ ಮಕ್ಕಳು ಇಲ್ಲದ ಕಾರಣ, ವಾದಿಗಳು ಮತ್ತು ನಾವು ಅವಳನ್ನು ನೋಡಿಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ. ಸದರಿ ತಿಮ್ಮವ್ವನ ಆಸ್ತಿಗಳನ್ನು ವಾದಿಗಳು ಮತ್ತು ನಾವು ಸಮನಾಗಿ ಹಂಚಿಕೊಳ್ಳಬೇಕು ಎಂದು ಊರಲ್ಲಿ ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ. ಸದರಿ ತೀರ್ಮಾನವನ್ನು ಮೀರಿ ನಾವು 2 ಆಸ್ತಿಗಳಿಗೆ ಮೃತ್ಯು ಪತ್ರವನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪಂಚಾಯಿತಿಯ ಪ್ರಕಾರ 1 ಮತ್ತು 3 ನೇ ಆಸ್ತಿಗಳನ್ನು ನಾನು ನೋಡಿಕೊಳ್ಳಬೇಕೆಂದು ಹಾಗೂ ದಾವಾ 2 ನೇ ಆಸ್ತಿಯನ್ನು ವಾದಿಗಳು ನೋಡಿಕೊಳ್ಳಬೇಕು ಎಂದು ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡಬೇಕು ಎನ್ನುವ ಕಾರಣ, 2 ಆಸ್ತಿಗಳಿಗೆ ನಾನು ಮೃತ್ಯು ಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ 2 ನೇ ಆಸ್ತಿಯಲ್ಲಿ ನಾನು ಸ್ವಾಧೀನತೆಯಲ್ಲಿ ಇಲ್ಲ, ವಾದಿಗಳು ಸ್ವಾಧೀನತೆಯಲ್ಲಿ ಇರುತ್ತಾರೆ ಎನ್ನುವುದು ನಿಜ. ವಾದಿಗಳಿಗೆ ಮೋಸ ಮಾಡುವ ಸಲುವಾಗಿ ಮೃತ್ಯುಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ತಿಮ್ಮವ್ವ ಮೃತಪಟ್ಟ ನಂತರ ದಾವಾ 2 ನೇ ಆಸ್ತಿಯ ಖಾತೆಯನ್ನು ಮಾಡಿಕೊಳ್ಳಲು ನಾನು ಒಪ್ಪಿಕೊಳ್ಳದ ಕಾರಣ, ವಾದಿಗಳು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ 2 ನೇ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎನ್ನುವುದು ನಿಜ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.